ಹೆಸರು ಪದವಿಗಳ ಆಕಾಂಕ್ಷೆಯಿಲ್ಲದೆ ಕೇವಲ ಸಾಮಾಜಿಕ ಕಳಕಳಿಯನ್ನು ತುಂಬಿಕೊಂಡಿರುವುದನ್ನು ಅರ್ಥಮಾಡಿಕೊಳ್ಳಬಹುದು. ಬಸವಣ್ಣನೇ ಮೊದಲಾದ ಹಿರಿಯ ವಚನಕಾರರು ತಮ್ಮ ತನು ಮನ ಧನಗಳನ್ನು ಶಿವಾರ್ಪಣಾ ಬುದ್ಧಿಯಿಂದ ಜಂಗಮಾರಾಧನೆಗೆ ವಿನಿಯೋಗಿಸಿ ಕೃತಕೃತ್ಯರಾದರು. ಜನರಿಗೆ ಇಹಪರಗಳನ್ನು ಸಾಧಿಸುವುದಕ್ಕಾಗಿ ನಿತ್ಯದಾಸೋಹದ ಜೊತೆಗೆ ಅನುಭವ ಮಂಟಪದಲ್ಲಿ ಶರಣರ ಗೋಷ್ಠಿಗಳನ್ನು ನಡೆಸುತ್ತಿದ್ದರು. ಅಲ್ಲಮಪ್ರಭುವು ತನ್ನ ವಿಚಾರಗಳನ್ನು ಶೂನ್ಯ ಸಿಂಹಾಸನದಲ್ಲಿ ಮಂಡಿಸಿ ಜನರಿಗೆ ಮಾರ್ಗದರ್ಶನ ಮಾಡಿ ದೇವ ಮಾನವನೆಂಬ ಹೆಸರನ್ನು ಪಡೆದನು. ಈ ವಚನಕಾರರಿಂದ ಸಮಾಜದಲ್ಲಿನ ಸಹಸ್ರ ದೋಷಗಳು ನಿವಾರಣೆಯಾಗಿ ಮಾನವ ಜನಾಂಗ ಶ್ರೇಯಸ್ಸಿನ ದಾರಿಯನ್ನು ಹಿಡಿಯುವಂತಾಯಿತು. ವಚನಕಾರರು ಈ ಬಗೆಯ ಮಹತ್ಕಾರ್ಯಗಳ ಸೋಪಾನದಿಂದ ದೈವತ್ವಕ್ಕೇರಿದರು ಸುತ್ತಮುತ್ತಲಿನ ಸಮಾಜದಲ್ಲಿನ ಅಜ್ಞಾನ ಅಂಧಕಾರಗಳನ್ನು ತೊಡೆದು ಹಾಕಿ ಕಾಯಕದ ಮಹತ್ವವನ್ನು ತಿಳಿಯಪಡಿಸಿ ಶಿವ ಸಾನಿಧ್ಯಕ್ಕೆ ಎಲ್ಲರೂ ಅರ್ಹರೆಂಬ ದಿವ್ಯತೆಯನ್ನು ಭೋದಿಸಿ ಮೆರೆದ ವಚನಕಾರರ ಸಾಮಾಜಿಕ ಕಳಕಳಿಯು ಸರ್ವಕಾಲಕ್ಕೂ ಶ್ಲಾಘನೀಯವಾಗಿದೆ.

ವಚನ ಸಾಹಿತ್ಯದ ಸ್ವರೂಪ:

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಚನ ಸಾಹಿತ್ಯವು ವಿಶಿಷ್ಟ ಪ್ರಕಾರದ್ದಾಗಿದೆ. ನಡುಗನ್ನಡ ಕಾಲದಲ್ಲಿ ಉಗಮಗೊಂಡು ಆ ಅವಧಿಯಲ್ಲಿ ಪ್ರಚಾರವಾಗಿ ಜನಮನ್ನಣೆಯನ್ನು ಪಡೆದು ಸಾಹಿತ್ಯ ಕ್ಷೇತ್ರದಲ್ಲಿ ಶಾಶ್ವತ ಸ್ಥಾನವನ್ನು ಪಡೆದುಕೊಂಡಿದೆ. ಅನ್ಯಭಾಷೆಗಳ ಯಾವುದೇ ಮಾದರಿಯನ್ನು ಯಾವ ದೃಷ್ಟಿಯಿಂದಲೂ ಅನುಕರಿಸದೇ ಹಾಗೂ ಆದರ್ಶವಾಗಿಟ್ಟುಕೊಳ್ಳದೇ ತನ್ನ ಸ್ವಂತಿಕೆಯನ್ನು ಮೆರೆದ ಈ ಪ್ರಕಾರವು ವಿಶ್ವಸಾಹಿತ್ಯಕ್ಕೆ ಕನ್ನಡದ ಕೊಡುಗೆಯಾಗಿದೆ. ನಿರಾಭರಣ ಸುಂದರಿಯಾಗಿ ಶೋಭಿಸಿದ ಈ ವಚನ ವಾಙ್ಮಯವು ಕನ್ನಡಕ್ಕೆ ಮೀಸಲಾದ, ಕನ್ನಡಕ್ಕೆ ಕೋಡನ್ನು ಮೂಡಿಸಿದ, ಕನ್ನಡಿಗರದೇ ಆಗಿ ರಂಜಿಸಿದ ಅಮೂಲ್ಯ ಸಂಪತ್ತು. ಈ ತೆರನಾದ ವಚನ ವಾಙ್ಮಯವು ಭಾರತದ ಬೇರೆ ಯಾವ ಭಾಷೆಯಲ್ಲಿ ಕಾಣಸಿಗುವುದಿಲ್ಲ. ಇದರ ವಸ್ತು ಭಾವ, ಭಾಷೆ, ಉದ್ದೇಶಗಳು ಕನ್ನಡದ ನೆಲದಲ್ಲಿಯೇ ಹುಟ್ಟಿ ಬೆಳೆದು ಕನ್ನಡ ಜನಮನದಲ್ಲಿ ಅಚ್ಚಳಿಯದೇ ಉಳಿದುವು.

ವಚನ ಎಂದರೆ "ಮಾತು" ಎಂಬ ಸಾಮಾನ್ಯ ಅರ್ಥವನ್ನು ಕೊಡುವ ಪದವಾಗಿದೆ. ಗದ್ಯ-ಪದ್ಯ ಮಿಶ್ರಿತವಾದ ಚಂಪೂಕಾವ್ಯಗಳದ್ದ ಬರುವ ಗದ್ಯ ಪ್ರಕಾರವನ್ನು "ವಚನ" ಎಂದು ಹಿಂದಿನ ಕವಿಗಳು ಹೆಸರಿಸಿದುದನ್ನು ನಾವು ಕಾಣಬಹುದು ಸಂಸ್ಕೃತದಲ್ಲಿ ವಚನ ಎಂಬುದಕ್ಕೆ ಮಾತು ಎಂಬ ಅರ್ಥ ಇದೆ.

> **"ಅನ್ಯರ ವಚನವ ಕೊಂಡಾಡಲು ಕರ್ಮ ಬಿಡದು.**
> **ಮೃದು ವಚನವೇ ಸಕಲ ಜಪಂಗಳಯ್ಯ.**
> **ಹುಸಿದವನೇ ಹೊಲೆಯನೆಂಬ ವಚನವುಂಟು"**

ಈ ರೀತಿಯ ವಾಕ್ಯಗಳಲ್ಲಿ ವಚನ ಎಂಬ ಪದಕ್ಕೆ ಮಾತು ಎಂಬ ಅರ್ಥವೇ ಕಂಡುಬರುತ್ತದೆ. ವಚನಗಳು ವಿಭಿನ್ನ ಸ್ವರೂಪದವುಗಳಾಗಿ ಕಾಣಿಸುತ್ತವೆ. ಗದ್ಯ ಪದ್ಯಗಳ ಸಮರಸ ಮಿಶ್ರಣವು ವಚನಗಳಲ್ಲಿ ಹದವರಿತು ಬೆರೆತಿರುವುದನ್ನು ಕಾಣಬಹುದು. ವಚನಗಳಲ್ಲಿ ಗದ್ಯದ ನಿರರ್ಗಳತೆ ಇಲ್ಲದಿದ್ದರೂ ಅದರ ಸರಳತೆ ಇದೆ ಪದ್ಯದ ಛಂದೋಗತಿ ಇಲ್ಲದಿದ್ದರೂ ಅದರ ಲಯವಿದೆ. ಹೀಗೆ ಗದ್ಯವಾಗಿದ್ದು ಗದ್ಯವಲ್ಲದಿರುವುದು. ಪದ್ಯವಾಗಿದ್ದು ಪದ್ಯವಲ್ಲದಿರುವುದು ವಚನಗಳ ವೈಶಿಷ್ಟ್ಯವಾಗಿವೆ. ಒಟ್ಟಿನಲ್ಲಿ ಪದ್ಯದಷ್ಟು ಬಿಗಿಯಿಲ್ಲದ ಗದ್ಯದಷ್ಟು ಸಡಿಲವಲ್ಲದ ಗದ್ಯ-ಪದ್ಯಗಳ ಸುಲಲಿತ ಮಿಶ್ರಣವೇ ವಚನವೆಂದು ಹೇಳಬಹುದು.

ಶಿವಶರಣರ ವಾಗ್ಧಾರೆಯು ವಚನಗಳ ಮೂಲಕ 12ನೆಯ ಶತಮಾನದಲ್ಲಿ ಹರಿಯತೊಡಗಿತು. ವಚನಗಳಲ್ಲಿ ಮಾನವ ಪ್ರೇಮ ಧೈವಭಕ್ತಿ ಮತ್ತು ನೈತಿಕ ಜೀವನದ ಆದರ್ಶಗಳು ಸೇರಿಕೊಂಡ ಶೈವ ಸಿದ್ಧಾಂತವು ಹೂವಿನ ಜೊತೆ ಸುಗಂಧ ಸೇರಿಕೊಂಡಂತೆ ಸುಂದರವಾಗಿ ಅರಳಿತು. ಶಿವನಲ್ಲಿ ಅಚಲವಾದ ನಿಷ್ಠೆಯನ್ನು ಹೊಂದಿದ ವೀರಶೈವ ಶರಣರು ವಚನ ಪ್ರಕಾರಗಳ ಮೂಲಕ ಧರ್ಮಬೋಧನೆಯನ್ನು ಮಾಡತೊಡಗಿದರು. ಈ ವಚನ ಪ್ರಕಾರಕ್ಕೆ ಚಂಪೂ ಕಾವ್ಯಗಳಲ್ಲಿರುವ ಗದ್ಯ ಸಾಹಿತ್ಯವೇ ಮೂಲವೆಂದೂ ತಮಿಳು ಸಾಹಿತ್ಯದ ನಾಯನಾರರ ತೇವಾರಗಳೇ ಮೂಲವೆಂದೂ ಕನ್ನಡದ ದೇಶೀಯ ಪದ ಚೌಕಟ್ಟಿನ ತ್ರಿಪದಿಗಳೇ ಮೂಲವೆಂದು ಹೇಳುವವರಿದ್ದಾರೆ. ಹೇಗಿದ್ದರೂ ವಚನಗಳು ಸರ್ವರಿಗೂ ಆತ್ಮೋದ್ಧಾರವನ್ನು ಮಾಡುವ ಹೆದ್ದಾರಿಯಾಗಿದೆ. ಅಪಾರವಾದ ಜ್ಞಾನ ಸಂಪತ್ತಿನಿಂದ ಕೂಡಿದ ಸಂಸ್ಕೃತ ಸಾಹಿತ್ಯವನ್ನು ಓದಲು, ಕೇಳಲೂ, ಮುಟ್ಟಲೂ, ಆಗದೆಂಬ ಮೈಲಿಗೆಗಳನ್ನು ಹೇರಿದ್ದ ಸಮಾಜದ ಕಟ್ಟುನಿಟ್ಟಾದ ಬಂಧನವನ್ನು ಕಡಿದೊಗೆದು ಈ ಜ್ಞಾನವು ಸರ್ವರಿಗೂ ಸನ್ಮಾರ್ಗವನ್ನು ತೋರುವ ಸ್ವತ್ತಾಗಬೇಕೆಂದು ವಚನಕಾರರು ಬಯಸಿದ್ದರು. ಗಂಡು-ಹೆಣ್ಣು ಎಂಬ ಭೇದವಿಲ್ಲದೆ ಆಬಾಲ ವೃದ್ಧರಾದಿಯಾಗಿ ಎಲ್ಲರಿಗೂ ಅರ್ಥವಾಗಬೇಕು, ಅನುಕರಣೆಗೆ ಯೋಗ್ಯವಾಗಿರ ಬೇಕು ಹಾಗೂ ಅನುಕರಣಾ ಸಾಧ್ಯವಾಗಬೇಕೆಂಬ ಉದ್ದೇಶವಿಟ್ಟುಕೊಂಡ ವಚನಕಾರರು ಪಂಡಿತ ಪಾಮರರೆಲ್ಲರೂ ಮೆಚ್ಚತಕ್ಕ ನಿತ್ಯ ಸತ್ಯದ ಜ್ಞಾನಾಮೃತವನ್ನು ವಚನಗಳ ಮೂಲಕ ಉಣಬಡಿಸಿದರು. ಅನುಭವಿಗಳ ಹೃದಯದಿಂದ ನೆಗೆದು ಉಕ್ಕುವ ಅನುಭವದಿಂದ ಕೂಡಿದ ಧರ್ಮದರ್ಶನಕ್ಕೆ ಅಧ್ಯಾತ್ಮ ಧರ್ಮನೀತಿಗಳ ಲೇಪವನ್ನು ಸರಳ ಭಾಷೆಯಿಂದ ಹಚ್ಚಿದರು. ಮಾನವನನ್ನು ದೇವನನ್ನಾಗಿ ಮಾಡಬಲ್ಲ ಉನ್ನತ ಗುಣವಿರುವ ವಚನ ಸಾಹಿತ್ಯವು ಶರಣರ ಬಾಯಿಯಿಂದ ಹೊರಹೊಮ್ಮಿದ ತಿಳಿಗಂಗೆಯ ಪ್ರವಾಹ ಅಮೋಘವಾದ ಅಧ್ಯಾತ್ಮಿಕ ತತ್ವದ ಹೊಂಗಿರಣಗಳ ಹೆಣಿಗೆ. ಪ್ರಾಸ, ಲಯ, ಛಂದೋಗತಿಗಳ ಬಂಧನದಿಂದ ಮುಕ್ತವಾಗಿ ಸರಾಗವಾಗಿ ಹರಿದ ಸಾರಾಮೃತ ಆದುದರಿಂದಲೇ ವಚನಗಳನ್ನು "ಪಂಚಮವೇದ"ಗಳ ಸ್ಥಾನಕ್ಕೇರಿಸಬಹುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ ಇನ್ನು ಕೆಲವರು ವಚನಗಳನ್ನು "ಕನ್ನಡದ ಉಪನಿಷತ್ತು"ಗಳೆಂದು ಕರೆದಿದ್ದಾರೆ.